# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 525 |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 30.01.2026 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯ ಸರ್ಕಾರವು ಆಶಾಕಾರ್ಯಕರ್ತೆಯರಿಗೆ ಮಾಸಿಕ ರೂ10,000 ನಿಶ್ಚಿತ ಗೌರವಧನ ನೀಡುವುದಾಗಿ ಘೋಷಿಸಿದ್ದರೂ ಈವರೆಗೆ ಅನುಷ್ಠಾನಗೊಂಡಿಲ್ಲ; ಈ ಭರವಸೆಯನ್ನು ಮರೆತ ಸರ್ಕಾರದ ನೈತಿಕ ಹೊಣೆಗಾರಿಕೆ ಏನು;</td><td>ರಾಜ್ಯ ಸರ್ಕಾರದ ಗೌರವಧನ ಮತ್ತು ಕೇಂದ್ರ ಸರ್ಕಾರದ ಪ್ರೋತ್ಸಾಹಧನ ಒಳಗೊಂಡಂತೆ ಮಾಸಿಕ ರೂ.10,000/- ಗಳು ಪ್ರತಿ ಆಶಾ ಕಾರ್ಯಕರ್ತೆಯರಿಗೆ ಲಭ್ಯವಾಗುವಂತೆ ಅನುವು ಮಾಡಿಕೊಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.</td></tr>
<tr><td>ಆ)</td><td>ಪ್ರಸ್ತುತ ಆಶಾಕಾರ್ಯಕರ್ತೆಯರಿಗೆ ನೀಡಲಾಗುತ್ತಿರುವ ಗೌರವಧನದ ಪ್ರಮಾಣ ಎಷ್ಟು; ಕಳೆದ 3 ವರ್ಷಗಳಲ್ಲಿ ಗೌರವಧನ ಪಾವತಿಯಲ್ಲಿ ಎಷ್ಟು ಬಾರಿ ವಿಳಂಬವಾಗಿದೆ.</td><td>ಪ್ರಸ್ತುತ ಆಶಾ ಕಾರ್ಯಕರ್ತೆಯರಿಗೆ ಕಾರ್ಯಕ್ಷಮತೆಯ ಆಧಾರದ ಮೇಲೆ ಕೆಳಕಂಡ ಗೌರವಧನ ಮತ್ತು ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.
<table>
<tr><th>ಕ್ರ.ಸಂ</th><th>ವಿವರ</th><th>ರೂಪಾಯಿಗಳಲ್ಲಿ</th></tr>
<tr><td>1</td><td>ರಾಜ್ಯ ಸರ್ಕಾರದಿಂದ ಮಾಸಿಕ ಗೌರವಧನವನ್ನು</td><td>ರೂ.5000/-</td></tr>
<tr><td>2</td><td>ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ಆವರ್ತಕ ಮತ್ತು ನಿಯಮಿತ ಚಟುವಟಿಕೆಗಳಿಗೆ ನೀಡಲಾಗುವ ಪ್ರೋತ್ಸಾಹಧನ</td><td>ರೂ.2000/-</td></tr>
<tr><td>3</td><td>ತಂಡ ಆಧಾರಿತ ಪ್ರೋತ್ಸಾಹ ಧನ (ಟೀಮ್ ಬೇಸ್ಡ್ ಇನ್ಸೆಂಟೀವ್)</td><td>ರೂ.1000/-</td></tr>
<tr><td>4</td><td>ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ಆಶಾಕಾರ್ಯಕರ್ತೆಯರಿಗೆ ಕಾರ್ಯಕ್ಷಮತೆಯ ಆಧಾರದ ಮೇಲೆ ನೀಡಲಾಗುವ ಪ್ರೋತ್ಸಾಹಧನ ಅಂದಾಜು</td><td>ಅಂದಾಜು ರೂ. 500 ರಿಂದ<br>ರೂ.1200</td></tr>
</table>
ಆಶಾ ಕಾರ್ಯಕರ್ತೆಯರಿಗೆ ನೀಡುವ ಮಾಸಿಕ ಗೌರವಧನ ಮತ್ತು ಪ್ರೋತ್ಸಾಹಧನವು ಸಂಪೂರ್ಣವಾಗಿ ಕಾರ್ಯನಿರ್ವಹಣೆಗೆ ಒಳಪಟ್ಟಿದೆ. ಕಾರ್ಯನಿರ್ವಹಿಸಿದ</td></tr>
</table>

| | | |
|---|---|---|
| | | ಎಲ್ಲಾ ಆಶಾ ಕಾರ್ಯಕರ್ತೆಯರಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳನ್ನು ಹೊರತುಪಡಿಸಿ ಕಾಲಮಿತಿಯೊಳಗೆ ಪ್ರತಿ ತಿಂಗಳ 10 ನೇ ತಾರೀಖಿನೊಳಗೆ ಮಾಸಿಕ ಗೌರವಧನ ಮತ್ತು ಪ್ರೋತ್ಸಾಹಧನವನ್ನು ಪಾವತಿ ಮಾಡಲಾಗುತ್ತಿದೆ.<br><br>ಕೇಂದ್ರ ಸರ್ಕಾರದ ನಿರ್ದೇಶದನ್ವಯ ರಾಷ್ಟ್ರೀಯ ಆರೋಗ್ಯ ಅಭಿಯಾನದ ಆರ್ಥಿಕ ವಹಿವಾಟುಗಳನ್ನು SNA–SPARSH ಮುಖೇನ ನಿರ್ವಹಿಸಬೇಕಾದ ಹಿನ್ನೆಲೆಯಲ್ಲಿ ಹೊಸ ವ್ಯವಸ್ಥೆಗೆ ರೂಪಾಂತರಗೊಳ್ಳುವ ಸಮಯದಲ್ಲಿ 2025-26 ಸಾಲಿನ ಆಗಸ್ಟ್, ಸೆಪ್ಟಂಬರ್ ಮತ್ತು ಅಕ್ಟೋಬರ್ ಮಾಹೆಯ ಪ್ರೋತ್ಸಾಹಧನದ ಪಾವತಿಯಲ್ಲಿ ತಾತ್ಕಾಲಿಕವಾಗಿ ವಿಳಂಬವಾಗಿರುತ್ತದೆ. |
| ಇ) | ಕೋವಿಡ್ ಸಂದರ್ಭದಲ್ಲಿ ಅತಿಯಾದ ಜವಾಬ್ದಾರಿ ಹೊತ್ತು ಶ್ರಮಿಸಿದ ಆಶಾಕಾರ್ಯಕರ್ತೆಯರಿಗೆ ಸರ್ಕಾರ ಈವರೆಗೆ ಸೂಕ್ತ ಮಾನ್ಯತೆ ಮತ್ತು ನಿಗದಿತ ವೇತನ ನೀಡದಿರುವುದು ತಾರತಮ್ಯವಲ್ಲವೆ; | ಆಶಾಕಾರ್ಯಕರ್ತೆಯರು ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತೆಯಾಗಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ತಾತ್ಕಾಲಿಕ/ ಹೊರಗುತ್ತಿಗೆ/ ಒಳಗುತ್ತಿಗೆ ನೌಕರರಾಗಿರುವುದಿಲ್ಲ. ಇವರು ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರಿಗೆ ಕಾರ್ಯಕ್ಷಮತೆಯ ಆಧಾರದ ಮೇಲೆ ಗೌರವಧನ/ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ಆಶಾ ಕಾರ್ಯಕರ್ತೆಯರಿಗೆ ವೇತನ ಅನ್ವಯಿಸುವುದಿಲ್ಲ.<br><br>ಕೋವಿಡ್ ಸಮಯದಲ್ಲಿ ಕೋವಿಡ್-19 ರ ನಿಯಂತ್ರಣ ಚಟುವಟಿಕೆಗಳಲ್ಲಿ ಭಾಗಿಯಾದ ಆಶಾ ಕಾರ್ಯಕರ್ತೆಯರಿಗೆ ಹೆಚ್ಚುವರಿಯಾಗಿ ಮಾಸಿಕ ರೂ. 1000/- ಗಳ ಪ್ರೋತ್ಸಾಹಧನವನ್ನು ನೀಡಲಾಗಿದೆ. |
| ಈ) | ಆಶಾ ಕಾರ್ಯಕರ್ತೆಯರಿಗೆ ನಿಗದಿತ ಗೌರವಧನ ಜಾರಿಗೆ ಯಾವುದೇ ಅಧಿಕೃತ ಆದೇಶ ಹೊರಡಿಸಲಾಗಿದೆಯೇ; ಇಲ್ಲದಿದ್ದರೆ ಈ ಭರವಸೆಯು ಕೇವಲ ಚುನಾವಣಾ ಚುಟುಕು ಮಾತಲ್ಲವೆ; | ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರದಿಂದ ಮಾಸಿಕ ಗೌರವಧನ ರೂ.5000/- ಗಳನ್ನು 12 ಷರತ್ತುಗಳಿಗೆ ಒಳಪಟ್ಟು ನೀಡಲಾಗುತ್ತಿದೆ.<br><br>ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ 8 ಆವರ್ತಕ ಮತ್ತು ನಿಯಮಿತ ಚಟುವಟಿಕೆಗಳಿಗೆ ಮಾಸಿಕ ರೂ.2000/- ಗಳನ್ನು ನೀಡಲಾಗುತ್ತಿದೆ.<br><br>ಆಯುಷ್ಮಾನ್ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೇಗೇರದ ಮತ್ತು ನಗರ ಪ್ರದೇಶದ ಆಶಾ ಕಾರ್ಯಕರ್ತೆಯರಿಗೆ ತಂಡ ಆಧಾರಿತ ಪ್ರೋತ್ಸಾಹಧನ ರೂ.1000/-ಗಳನ್ನು ರಾಜ್ಯ ಸರ್ಕಾರದಿಂದ ನೀಡಲು ಆದೇಶಿಸಲಾಗಿದೆ. |
| ಉ) | ಆಶಾ ಕಾರ್ಯಕರ್ತೆಯರ ಗೌರವಧನವನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಯಾವಾಗ ಪರಿಷ್ಕೃತ ಆದೇಶ ಹೊರಡಿಸಲಿದೆ; ಈ ಸಂಬಂಧ ಸ್ಪಷ್ಟವಾದ ಟೈಮ್ ಲೈನ್ ನೀಡಲಾಗುವುದೆ? | |

**ಸಂಖ್ಯೆ: ಆಕುಕ 4 ಎಸ್.ಟಿ.ಕ್ಯೂ 2026**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು